ಕನ್ನಡ ಅನುವಾದ ಕ್ಷೇತ್ರದಲ್ಲಿ ಪರಿಚಿತರಾಗಿರುವ ಎಸ್.ಡಿ. ಕುಮಾರ್ ಓದಿದ್ದು ಎಂ.ಕಾಂ. ಸಾಹಿತ್ಯ ಕ್ಷೇತ್ರದ ಒಡನಾಟ ಅವರಿಗಿಷ್ಟ. ತೆಲುಗು ಮತ್ತು ಇಂಗ್ಲಿಷ್ ಭಾಷೆಯ ಹಲವಾರು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಬಂಧ, ವೈಜ್ಞಾನಿಕ ಲೇಖನ, ಕೃಷಿ ಮತ್ತು ಅಧ್ಯಾತ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನೂ ಬರೆದು ಪ್ರಕಟಿಸಿದ್ದಾರೆ. ಕಿರುತೆರೆ ಧಾರಾವಾಹಿಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವೂ ಅವರಿಗಿದೆ.

ಅಂತ ಅಳತೊಡಗಿದರು. 'ನಾಳೆ ಬರ್ತೀನಿ ಮಕ್ಕಳಾ' ಅಂತ ಮೆಲುದನಿಯಲ್ಲೇ ಹೇಳುತ್ತಿದ್ದ ಮಾಧವ. ಈ ಮಾಧವ ತುಂಬಾ ಹಟವಾದಿಯಾಗಿ ಬಿಟ್ಟಿದ್ದಾನೆ ಅಂತ ಕೊನೆಗೂ ಗ್ರಹಿಸಿದ ಅವರೆಲ್ಲ ಅವನಿಗೆ ಉಗಿದು, ತಾವು ಒಂದೆರಡು ಏಟು ಹಾಕಿ ನಿರ್ಗಮಿಸಿದರು.

ಆರು ತಿಂಗಳ ಕಾಲ ಪ್ರಶಾಂತಿ ಮತ್ತು ಮಾಧವನನ್ನು ಅವರ ಮನೆಗಳಿಗೆ ವಾಪಸ್ಸು ಕರೆಸಲು ಏನೆಲ್ಲ ಪ್ರಯತ್ನಗಳು ನಡೆದವು. ಅವರಿಬ್ಬರನ್ನೂ ಬೇರೆ ಬೇರೆ ಮಾಡಬೇಕು ಅಂತ ಶತಪ್ರಯತ್ನ ಮಾಡಿದಷ್ಟೂ ಇನ್ನೂ ಹತ್ತಿರಾದರು ಅವರು. ಕೆಲಸಗಳಿಗೆ ಹೋಗುವಾಗ ಮಾತ್ರ ದೂರ. ಮನೆಯೊಳಗೆ ಬಂದುಬಿಟ್ಟರೆ ಜಸ್ಟ್ ಒಂದು ಕೈಯಳತೆ ದೂರದಲ್ಲಿರುತ್ತಿದ್ದರು. ವಿಚ್ಛೇದನ ಇಲ್ಲದೇನೆ ಎರಡೂ ಜೋಡಿಗಳು ಬೇರೆ ಬೇರೆಯಾದವು. ಒಂದು ವರ್ಷದ ಬಳಿಕ ಮಣಿಶಂಕರ್ ಇನ್ನೊಂದು ಮದುವೆಯಾದ. ಮಾಧವನ ಹೆಂಡತಿ ದಿನದಲ್ಲಿ ಕನಿಷ್ಠ ಹತ್ತುಸಲ ಇವರಿಬ್ಬರಿಗೂ ಶಾಪ ಹಾಕ್ತಾನೇ ಇರುತ್ತಾಳೆ.

* * *

ಕೇವಲ ಅವರಿಬ್ಬರ ನಡುವೆ ಮಾತ್ರವೇ ತುಂಬಾ ಅದ್ಭುತವಾಗಿದೆ ಬದುಕು. ಆಟಪಾಟ, ಹರಟೆ, ದಿನಕ್ಕೊಂದು ಹೊಸ ಅಡುಗೆ. ಟಿವಿಯಲ್ಲಿ ಇಷ್ಟದ ಸಿನಿಮಾ ನೋಡೋದು. ನದಿ ದಂಡೆಯಲ್ಲಿ ರಿಕಾಮಿಯಾಗಿ ಕೂರೋದು.

'ಅವಳಿಗೇನು ಮಿಟಕಲಾಡಿ. ಇನ್ನೊಂದು ಹೆಂಗಸಿನ ಗಂಡನಿಗೆ ತಗುಲಿಕೊಂಡು ಇಲ್ಲಿ ಬಂದು ಸಾಯ್ತಿದಾಳೆ. ಇವನ ಮೊದಲನೆ ಹೆಂಡತಿಯ ಶಾಪ ತಗುಲ್ದೆ ಇರುತ್ತಾ?' ಪಕ್ಕದ ಮನೆಯಾಕೆ ಇವಳ ಕಿವಿಗೆ ಬೀಳುವಂತೆ ಯಾರ ಜೊತೆಯಲ್ಲೋ ಮಾತಾಡುತ್ತಿರುವಾಗ, ತಮ್ಮಿಬ್ಬರ ನಡುವೆ ಇನ್ನೂ ಈ ತರಹದವರು ಸಾಕಷ್ಟು ಮಂದಿ ಇದಾರೆ ಅಂದುಕೊಂಡಳು ಪ್ರಶಾಂತಿ. ಈ ತರಹದ ಟೀಕೆಗಳಿಂದ ತನ್ನ ಹಳೇ ಸರ್ಕಲ್ ಜನರ ಜೊತೆ ಬೆರೆಯಲಿಕ್ಕೆ ಅನೀಸಿಯಾಗಿ ಫೀಲ್ ಆಗುತ್ತಿದ್ದ ಮಾಧವ. 'ಹೆದರಬಾರದು. ಗಟ್ಟಿಯಾಗಿ ನಿಲ್ಲಬೇಕು, ಎದುರಿಸಬೇಕು' ಸ್ವಲ್ಪ ಗಟ್ಟಿಯಾಗೇ ಹೇಳುತ್ತಿದ್ದಳು ಪ್ರಶಾಂತಿ.

ಘಟನೆ: ಒಮ್ಮೆ ಮಾರ್ಕೆಟ್ಟಿಗೆ ಹೋಗಿದ್ದಾಗ ಮಾಧವನ ಭುಜದ ಮೇಲೆ ಪ್ರಶಾಂತಿ ಕೈಹಾಕಿ ಏನೋ ಹೇಳುತ್ತಾ ಹೆಜ್ಜೆ ಸರಿಸುತ್ತಿದ್ದರೆ, ಇವನು ಥಟ್ಟನೆ ಅವಳ ಕೈಎಳೆದು ಹಾಕಿ ಅವಳ್ಯಾರೋ ಗೊತ್ತಿಲ್ಲ ಎಂಬಂತೆ ಲಗುಬಗನೆ ದೂರ ಸರಿದುಬಿಟ್ಟ. ಹೆಂಡತಿ ಕಡೆಯ ಬಂಧು ಒಬ್ಬನನ್ನು ನೋಡಿ ಮಾಧವ ಹಾಗೆ ಮಾಡ್ದ ಅಂತ ತಿಳಿದ ಮೇಲೆ ಮನೆಯಲ್ಲಿ ರಣರಂಗವಾಯ್ತು. ಎಷ್ಟು ದೊಡ್ಡ ಗಲಾಟೆ ಅಂದರೆ ನಾವಿಬ್ಬರೂ ಹೀಗೆಲ್ಲ ಬೈಯ್ದಾಡಬಹುದೇ ಎಂಬ ಸತ್ಯ ಅವರಿಗೇ ತಿಳಿಯದಷ್ಟು ವಿಭ್ರಮೆ. ಅವನ ತೋಳ ಮೇಲಿದ್ದ ತನ್ನ ಕೈಯನ್ನು ಕಿತ್ತೆಸೆದು, ಚಕ್ಕನೆ ತನ್ನಿಂದ ದೂರ ಹೋದದ್ದರ ಬಗ್ಗೆ ಅವಳು ಪದೇಪದೇ ಕೇಳಿ ದಬಾಯಿಸುತ್ತಿದ್ದರೆ ಮಾಧವ ಬೇಸತ್ತು ಹೋದ.

'ಹೊರಗೂ ಕೂಡ ಮೈಮೇಲೆ ಬಿದ್ದು ತಿರುಗಾಡಬೇಕಾ? ಮೂತ್ರ ವಿಸರ್ಜನೆ ಬಾತ್ ರೂಮಿನಲ್ಲಿ ಮಾಡ್ತೇವೆ. ಮಾರ್ಕೆಟ್ ಮಧ್ಯದಲ್ಲಿ ಅಲ್ಲ' ಒದರಿ ಆಚೆ ಹೋದ. ಅವಳಲ್ಲಿ ದಿಗ್ಭ್ರಮೆ! ತನ್ನ ಪ್ರೀತಿಯನ್ನು ಯಾವುದಕ್ಕೆ ಹೋಲಿಸಿಬಿಟ್ಟ!!

ಊರೆಲ್ಲ ತಿರುಗಾಡಿ ಎರಡು ತಾಸಿನ ತರುವಾಯ ಮಾಧವ ಮನೆಗೆ ಬಂದರೆ, ಮಣಿಕಟ್ಟಿನ ಜಾಗದಲ್ಲಿ ಬ್ಲೇಡಿಂದ ಕುಯ್ದುಕೊಂಡು ಸೋರುತ್ತಿರುವ ರಕ್ತದಿಂದ ಬಾತ್ ರೂಮಿನಲ್ಲಿ ಬಿದ್ದಿದ್ದಳು ಪ್ರಶಾಂತಿ. ಅಂಥಾ ಭಯವನ್ನು ಇಲ್ಲಿಯತನಕ ಅನುಭವಿಸಿರಲಿಲ್ಲ ಮಾಧವ. ಗಡಗಡನಡುಗುತ್ತಲೇ ಹತ್ತಿರ ಹೋಗಿ... ತನ್ನ ಕೈಯಲ್ಲಿ ವಿಲಿವಿಲಿ ಒದ್ದಾಡತೊಡಗಿದ ಅವಳನ್ನು ಎಬ್ಬಿಸಿ ಕೂರಿಸಿ, ಬಾಗಿಲು ವಾರೆಯಾಗಿ ಹಾಕಿ, ಫೋನ್ ಕೈಲಿಡಿದು ಆಚೆ ಬಂದು, ಮಣಿಶಂಕರ್‌ಗೆ ಫೋನಾಯಿಸಿ ವಿಷಯ ತಿಳಿಸಿ 'ಆಸ್ಪತ್ರೆಗೆ ನೀವೇ